ಎಂದು ಭಾವಿಸಿದ್ದರು. ಹಿಂತಿರುಗಿ ಬಂದು ತಂದೆಯ ಕೆಲಸಕ್ಕೆ ಸಹಾಯ ಮಾಡಬಹುದು ಎಂಬ ಆಸೆ. ತಾಯಿಯ ಮರಣದ ಆಘಾತದಲ್ಲಿ ತಂದೆಯ ಮಾನಸಿಕ ಸ್ಥಿತಿ ಮತ್ತೆ ಸೂಕ್ಷ್ಮದ್ದಾಗಿತ್ತು. ಆದರೆ ಹೋಟೆಲಿನಲ್ಲಿ ಅವರದು 18ರಿಂದ 20 ಗಂಟೆಗಳ ಕೆಲಸ! ಕೆಲವು ಬಾರಿ ಬೆಳಗ್ಗೆ 8 ಗಂಟೆಗೆ ಕೆಲಸಕ್ಕೆ ಹೋದರೆ, ಮಾರನೆ ದಿನ ರಾತ್ರಿ 12 ಗಂಟೆಗೆ ಬಿಡುವು ಸಿಗುತ್ತಿತ್ತು. ಅಂದರೆ ಸೀದಾ 36 ಗಂಟೆ ಕೆಲಸದಲ್ಲಿ ತೊಡಗಿರುತ್ತಿದ್ದರು.

ಮಹಾಬಲೇಶ್ವರದಲ್ಲಿ ಪ್ರವಾಸದ ದಿನಗಳಲ್ಲಿಯಂತೂ ಅವರಿಗೆ ಪುರಸೊತ್ತು ಅನ್ನುವುದಿರಲಿಲ್ಲ. ಜೀತದಾಳಿನಂತೆ ಅವರ ಕೆಲಸ. ಹೋಟೆಲಿನ ಮಾಲೀಕನಿಗೆ ಗೊತ್ತಿತ್ತು, ಈ ಅಂಧನಿಗೆ ಇನ್ನೆಲ್ಲೂ ಕೆಲಸ ಸಿಗುವುದಿಲ್ಲ. ಆತ ಭಾವೇಶ್‌ಗೆ ಉಪಕಾರ ಮಾಡಲೆಂದು ಕೆಲಸ ಕೊಟ್ಟಿರಲಿಲ್ಲ. ಭಾವೇಶ್ ಅವರಿಂದ ಹೆಚ್ಚು ಹೆಚ್ಚು ಕೆಲಸ ಕಿತ್ತುಕೊಳ್ಳುವುದೇ ಆತನ ಉದ್ದೇಶವಾದಂತಿತ್ತು. ಭಾವೇಶ್ ಅವರ ಅಸಹಾಯಕ ಸ್ಥಿತಿಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಿದ್ದ. ಆದರೂ ದುಡಿವ ಈ ಮೊದಲ ಅವಕಾಶ ಭಾವೇಶ್ ಅವರಿಗೆ ಉದ್ಯಮದ ಬಹಳಷ್ಟು ಪಾಠಗಳನ್ನು ಕಲಿಸಲಿತ್ತು. ಕಾಲೇಜಿನ ಅರ್ಥಶಾಸ್ತ್ರದ ತರಗತಿಯಲ್ಲಿಯೂ ಕಲಿಯದಿದ್ದ ಪ್ರಾಯೋಗಿಕ ಪಾಠಗಳು ಇಲ್ಲಿ ಎದುರಿಗಿದ್ದವು. ತಮ್ಮ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸವೂ ಮೂಡಲಿತ್ತು.

ಹೆಸರಿಗೆ ಭಾವೇಶ್ ಟೆಲಿಫೋನ್ ಆಪರೇಟರ್ ಆಗಿದ್ದರು. ಆದರೆ ಹೋಟೆಲಿನ ಮುಂಗಟ್ಟೆಯಲ್ಲಿ ಕುಳಿತ ಅವರು ಹೋಟೆಲಿನ 'ಫ್ರಂಟ್ ಆಫೀಸ್'ನ ಎಲ್ಲ ಕೆಲಸಗಳನ್ನು ನಿರ್ವಹಿಸಬೇಕಿತ್ತು. ಭಾವೇಶ್ ಅವರ ನೆನಪಿನ ಶಕ್ತಿ ಅಸಾಧಾರಣವಿತ್ತು. ಅವರು ಹೋಟೆಲಿನ ವ್ಯವಹಾರಗಳಿಗೆ ಸಂಬಂಧಿಸಿದ ಬಹಳಷ್ಟು ಕೆಲಸಗಳನ್ನು ಅತಿ ಶೀಘ್ರವಾಗಿ ಕಲಿತಿದ್ದರು. ಪ್ರತಿಬಾರಿ ಆಗಮಿಸುವ ಗ್ರಾಹಕರನ್ನು, ಹೋಟೆಲಿನ ಸಿಬ್ಬಂದಿಗಳನ್ನು ಅವರ ದನಿಯಿಂದಲೇ ಗುರುತಿಸಿ ಬಿಡುತ್ತಿದ್ದರು. ಆ ಗ್ರಾಹಕರ, ಟ್ರಾವೆಲ್ ಏಜೆಂಟರ ಹಾಗೂ ಹೋಟೆಲ್‌ನೊಡನೆ ವ್ಯವಹರಿಸುವ ಎಲ್ಲರ ಟೆಲಿಫೋನ್ ನಂಬರ್ ಅವರಿಗೆ ನೆನಪಿರುತ್ತಿತ್ತು. ನೂರಾರು ದೂರವಾಣಿ ಸಂಖ್ಯೆಗಳನ್ನು ನೆನಪಿಟ್ಟುಕೊಳ್ಳುವ ಅಸಾಧಾರಣ ಸ್ಮರಣ ಶಕ್ತಿಯಿಂದಾಗಿ, ಭಾವೇಶ್ ನಡೆದಾಡುವ ಟೆಲಿಫೋನ್ ಡೈರೆಕ್ಟರಿಯಂತಾಗಿದ್ದರು. ಹೋಟೆಲಿನ ಮಾಲೀಕನಾಗಲಿ, ಸಿಬ್ಬಂದಿಯಾಗಲೀ ಯಾರಿಗಾದರೂ ಫೋನ್ ಮಾಡಬೇಕು ಎಂದರೆ, ಡೈರೆಕ್ಟರಿಯಲ್ಲಿ ಹುಡುಕುವ ಕಷ್ಟಕ್ಕೆ ಹೋಗದೆ, ಭಾವೇಶ್ ಅವರಿಗೆ ಫೋನ್ ಮಾಡುವರು!

ಹೀಗೆಯೇ ಸಾಕಷ್ಟು ತಿಂಗಳುಗಳು ಕಳೆದವು. ಕೊನೆಗೆ ಭಾವೇಶ್ ಅವರಿಗೆ ಅರಿವಾಯಿತು, ಈ ಕೆಲಸದಲ್ಲಿ ತಮ್ಮ ಬದುಕಿನ ಉದ್ಧಾರವಿಲ್ಲ. ತಮ್ಮ ಜೀವನ ಲಕ್ಷ್ಯ ಇದಲ್ಲ. ಭಾವೇಶ್ ಅವರಿಗೆ ಈ ಪಂಜರದಿಂದ ಹೊರ ಹಾರಬೇಕು, ಮತ್ತೊಮ್ಮೆ ಸ್ವಚ್ಛ ಆಗಸದಲ್ಲಿ ಸ್ವತಂತ್ರವಾಗಿ ಬಿಡುಗಡೆಯ ಹಕ್ಕಿಯಂತೆ ರೆಕ್ಕೆ ಬಿಚ್ಚಬೇಕು ಅನಿಸಿತು.

ಇದೇ ಸಮಯದಲ್ಲಿ ಒಂದು ದಿನ ಭಾವೇಶ್ ಅವರ ಗೆಳೆಯನೊಬ್ಬ ಮನೆಗೆ ಬಂದ. 'ಹರಿದ್ವಾರದಲ್ಲಿರುವ ಬಾಬಾ ರಾಮ್‌ದೇವ್ ಅವರ ಬಗ್ಗೆ ಬಹಳಷ್ಟು ಕೇಳಿದ್ದೇನೆ. ಅವರ ಬಳಿ ಯಾವುದೇ ರೋಗವನ್ನೂ ಗುಣವಾಗಿಸುವ ಆಯುರ್ವೇದದ ಔಷಧಿಗಳಿವೆ. ನಡೆ, ನಾನು ನಿನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗುತ್ತೇನೆ' ಎಂದ. 'ಅವರ ಬಳಿ ನಿನ್ನ ಕಣ್ಣುಗಳ ಚಿಕಿತ್ಸೆ ನಡೆಯುವ ಭರವಸೆ ನನಗಿದೆ' ಎಂದು ಒತ್ತಿ ಹೇಳಿದ. ಮನೆಯ ಮೂಲೆಯಲ್ಲಿ ಫೈಲುಗಳ ರಾಶಿ ಬಿದ್ದಿತ್ತು. ಅಲೋಪತಿ, ಹೋಮಿಯೋಪತಿ, ಆಯುರ್ವೇದ ಎಲ್ಲದರ ಚಿಕಿತ್ಸೆಯನ್ನೂ ತೆಗೆದುಕೊಂಡು ಆಗಿತ್ತು. ಯಾರು ಏನೇ ಸಲಹೆ ಕೊಟ್ಟರು ಅದನ್ನು ಪಾಲಿಸುತ್ತಿದ್ದರು. ತಮ್ಮ ಅಂಧತ್ವವನ್ನು ಸ್ವೀಕರಿಸಿ ಬದುಕು ಮುಂದುವರೆಸುತ್ತಿದ್ದರೂ, ಇಂದಲ್ಲ, ನಾಳೆ ತಮ್ಮ ಕಣ್ಣಿಗೆ ದೃಷ್ಟಿ ಬರಬಹುದೆಂಬ ಅಂತರಂಗದ ಆಶಾವಾದ ಇನ್ನೂ ನಂದಿರಲಿಲ್ಲ.

ಅವರಿಗೆ ನೆನಪಿತ್ತು, ಹೋಮಿಯೋಪತಿಯ ಚಿನ್ನದ ಪದಕ ಪಡೆದ ವೈದ್ಯರಾದ ಡಾ. ಶ್ರೀಮತಿ ಬಸ್ರಾ ಸಾಕಷ್ಟು ಪ್ರಸಿದ್ಧರಿದ್ದರು. ಬಾಂಬೆಯ 'ಪ್ರಿನ್ಸೆಸ್ ಮಾರ್ಗ'ದಲ್ಲಿ ಅವರ ಕ್ಲಿನಿಕ್ ಇತ್ತು. ಅಲ್ಲಿಗೆ ಭಾವೇಶ್ ಹೋದಾಗ, ಅಲ್ಲಿ ಆಗಲೇ ಬಲು ಉದ್ದದ ಸರತಿ ಸಾಲು ನಿಂತಿತ್ತು. ಸುಮಾರು ನಾಲ್ಕೈದು ಗಂಟೆಗಳ ನಂತರ ವೈದ್ಯರು ಬರಲಿದ್ದರು. ಮೊದಲ ಮಹಡಿಯಲ್ಲಿ ಕ್ಲಿನಿಕ್ ಇತ್ತು. ಜನಗಳ ಸರತಿಯ ಸಾಲು ಅವರ ಕ್ಲಿನಿಕಿನ ಬಾಗಿಲಿನಿಂದ ಹಿಡಿದು ಪಾದಚಾರಿಗಳ ಹಾದಿಗೂ ಹರಿದು ನಿಂತಿತ್ತು. ಅವರ ಭೇಟಿ ಕೇವಲ ಐದು ನಿಮಿಷಗಳದ್ದು. ಆದರೆ ಎಷ್ಟೊಂದು ಜನಜಂಗುಳಿ. ಇಷ್ಟು ಜನರು ಇಷ್ಟು ಗಂಟೆಗಳು ನಿಲ್ಲಲು ಸಿದ್ಧವಿದ್ದರು ಎಂದರೆ, ಅವರಿಗೆ ಆ ವೈದ್ಯರ ಬಗ್ಗೆ ಎಷ್ಟು ನಂಬುಗೆ, ಭರವಸೆ ಇದೆ ಎಂದು ಅರ್ಥವಾಗುತ್ತಿತ್ತು. ಆ ದಿನ ಅದೇ ಸಾಲಿನಲ್ಲಿ ಭಾವೇಶ್ ನಿಂತು, ಕಡೆಗೂ ವೈದ್ಯರನ್ನು ಭೇಟಿಯಾಗಿದ್ದರು. ಡಾ. ಬಸ್ರಾ ಅವರನ್ನು ಪರೀಕ್ಷೆ ಮಾಡಿ ಹೇಳಿದರು. 'ಹೋಮಿಯೋಪತಿಯಲ್ಲಿ ನಿಮ್ಮ ಕಣ್ಣುಗಳಿಗೆ ನಮ್ಮಲ್ಲಿ ಯಾವುದೇ ಔಷಧಿಯೂ ಇಲ್ಲ'. ಇಲ್ಲದ ಆಶ್ವಾಸನೆ ನೀಡದೆ ಸ್ಪಷ್ಟವಾಗಿ ಹೇಳಿದ್ದು ಒಂದು ರೀತಿ ಭಾವೇಶ್ ಅವರಿಗೆ ತಮ್ಮ ಬದುಕಿನೊಡನೆ ರಾಜಿಯಾಗಲು ಪ್ರೇರೇಪಿಸಿತ್ತು. ಹೀಗೇ ಆಸೆನಿರಾಸೆಯ ಜೋಕಾಲಿಯಲ್ಲಿ ಜೀಕಿದ ಅದೆಷ್ಟೋ ಅನುಭವಗಳು ಭಾವೇಶರ ಜೋಳಿಗೆಯಲ್ಲಿದ್ದವು. ಕಂಡ ಕಂಡಲ್ಲಿಗೆ ಹೋಗಿದ್ದರು, ತಮ್ಮ ದೃಷ್ಟಿ ಬರಬಹುದೇನೋ ಎಂಬ ಆಗಾಧ ಆಸೆ. ಪ್ರತಿ ಬಾರಿ ನಿರಾಶೆಯಿಂದ ಹಿಂತಿರುಗಿದ್ದರು. ಹಾಗೆಂದೇ ಕಣ್ಣುಗಳ ಚಿಕಿತ್ಸೆಯ ಬಗ್ಗೆ ಅವರಿಗೆ ಇನ್ನು ಸಾಕು ಎಂಬಷ್ಟು ಸುಸ್ತಾಗಿತ್ತು. ಇನ್ನು ಹುಡುಕಿ ಅಲೆಯುವುದು ಬೇಡ. ತನ್ನ ಅಂಧತ್ವವನ್ನು ತಾನಾಗಲೇ ಸ್ವೀಕರಿಸಿದ್ದಾಗಿದೆ. ಇಲ್ಲದ ಆಸೆ ಬೇಡ ಎಂದು ಭಾವೇಶ್ ನಿರ್ಧರಿಸಿದ್ದರು.

ಆ ಮಿತ್ರನಿಗೆ ಭಾವೇಶ್ ಹೇಳಿದರು, 'ನಾನು ನೋಡಬೇಕಾದ ವೈದ್ಯರನ್ನೆಲ್ಲ ಕಂಡಾಗಿದೆ. ನಿಂಬು ಮಿರ್ಚಿಯಿಂದ ಹಿಡಿದು ದಾರಯಂತ್ರಗಳನ್ನೂ ಕಟ್ಟಿಯಾಗಿದೆ. ಈಗ ನನ್ನ ಬಳಿ ಸಮಯವೂ ಇಲ್ಲ, ಹಣವೂ ಇಲ್ಲ. ನನಗೆ ಇನ್ನು ವ್ಯರ್ಥ ಪ್ರಯತ್ನಗಳಲ್ಲಿ ಕಾಲಹರಣ ಮಾಡುವ ಪುರಸೊತ್ತು ಇಲ್ಲ'. ಆದರೆ ಗೆಳೆಯ ತನ್ನ ಹಟ ಬಿಡಲು ಸಿದ್ಧವಿರಲಿಲ್ಲ. ಆತನಿಗೆ ಭಾವೇಶ್ ಅವರ ಆರ್ಥಿಕ ಪರಿಸ್ಥಿತಿಯ ಅರಿವಿತ್ತು. ಆತನೇ ಹರಿದ್ವಾರಕ್ಕೆ ಟಿಕೆಟ್ ತೆಗೆದುಕೊಂಡು, 'ಕೇವಲ ಐದಾರು ದಿನಗಳ ಮಾತು, ಬಾ' ಎಂದು ಬಲವಂತ ಪಡಿಸಿ ಹೊರಡಿಸಿದ. 'ಇದು ನಿನ್ನ ಕಡೆಯ ಪ್ರಯತ್ನ, ಮಾಡಿ ನೋಡೋಣ' ಎಂದು ಪ್ರೀತಿಯಿಂದ ಒತ್ತಾಯಿಸಿದ.

ಆ ಹೋಟೆಲ್‌ನಲ್ಲಿ ಬಂಧಿಯಾಗಿದ್ದ ಭಾವೇಶ್ ಅವರಿಗೆ ಹೊರಗೆ ಹೋಗಿ ಬರಲು ಇದೊಂದು ಅವಕಾಶ ಅನ್ನಿಸಿ ಹೊರಟರು. ಪ್ರವಾಸದ ಇಡೀ ಹೊತ್ತು, ಸ್ವಾಮಿ ರಾಮದೇವ್ ಅವರ ಅನೇಕ ಚಮತ್ಕಾರಗಳ ಬಗ್ಗೆ ಗೆಳೆಯ ಹೇಳಿದ್ದೂ ಹೇಳಿದ್ದೆ. ತಮ್ಮ ಕಣ್ಣುಗಳ ದೃಷ್ಟಿಯ ಆಸೆ ಬಿಟ್ಟಿದ್ದ ಭಾವೇಶ್ ಅವರಿಗೆ ಗೆಳೆಯನ ಮಾತು ಕೇಳುತ್ತಾ ಕೇಳುತ್ತಾ, 'ಅರೆ ನಾನು ಹೀಗೆ ಹೋಗಿ, ಅಲ್ಲಿಂದ ನನ್ನ ದೃಷ್ಟಿಯೊಂದಿಗೇ ಹಾಗೆ ಹಿಂತಿರುಗಿ ಬರುತ್ತೇನೆ' ಎಂಬಷ್ಟು ಆಸೆ ಎದೆಯಲ್ಲಿ ಚಿಗುರಿ ಹೆಮ್ಮರವಾಯಿತು. ಆ ಸಮಯದಲ್ಲಿ ಅಮ್ಮ ಹೇಳಿದ ಒಂದು ಕತೆ ನೆನಪಾಯಿತು. ಆ ಕತೆಯಲ್ಲಿ ಓರ್ವ ಮಗುವಿತ್ತು. ತನ್ನ ತಂದೆಯೊಡನೆ ರೈಲಿನಲ್ಲಿ ಪ್ರಯಾಣ ಮಾಡುತ್ತಿತ್ತು. ಮಗು ಕಿಟಕಿಯ ಹೊರಗೆ ನೋಡುತ್ತಾ ಖುಷಿಯಿಂದ ತಂದೆಗೆ ಜೋರು ದನಿಯಲ್ಲಿ ಹೇಳುತ್ತಿದ್ದ. 'ನೋಡು ಅಪ್ಪ ಅದೆಷ್ಟು ಮರಗಳಿವೆ, ಕೆರೆಗಳಿವೆ, ಪಕ್ಷಿಗಳಿವೆ'. ಆರಂಭದಲ್ಲಿ ಸುತ್ತಲಿದ್ದ ಜನರು ಏನೂ ಹೇಳಲಿಲ್ಲ. ನಂತರ ಅವನ ಏರು ದನಿಯಿಂದ ಕಿರಿಕಿರಿಯಾದ ಅವರು ಮಗುವಿನ ತಂದೆಗೆ 'ನಿಮ್ಮ ಮಗುವನ್ನು ಸ್ವಲ್ಪ ಶಾಂತವಾಗಿ ಇರಲು ಹೇಳಿ' ಎಂದರು. ತಂದೆ ಪ್ರಯತ್ನಿಸಿದರೂ, ಮಗು ಅದೆಷ್ಟು ಖುಷಿಯಾಗಿತ್ತು ಎಂದರೆ ತನ್ನ ಸಂತಸವನ್ನು ಕೂಗಿ ಹೇಳದೆ ಇರಲಾರದಾಗಿತ್ತು. ಸಹ ಪ್ರಯಾಣಿಕರಿಗೆ ಈಗಂತೂ ತೀರಾ ರೇಗಿಹೋಯಿತು. ಈ ಹುಡುಗನಿಗೆ ಎಲ್ಲೋ ತಲೆ ಕೆಟ್ಟಿದೆ ಅನಿಸಿ ತಂದೆಯನ್ನು ತರಾಟೆಗೆ ತೆಗೆದುಕೊಂಡರು. ಆಗ ಆ ತಂದೆ ಬಿಡಿಸಿ ಹೇಳಿದರು, 'ನನ್ನ ಮಗನಿಗೆ ತಲೆ ಸರಿ ಇದೆ. ಆದರೆ ಆತ ಹುಟ್ಟಿನಿಂದ ಕುರುಡನಾಗಿದ್ದ. ಈಗಷ್ಟೇ ಆತನ ಕಣ್ಣುಗಳ ಚಿಕಿತ್ಸೆಯಾಗಿ, ನೋಡಲು ತೊಡಗಿದ್ದಾನೆ'.

ಈ ಕತೆ ಭಾವೇಶ್ ಅವರ ತಲೆಯಲ್ಲಿ ಪ್ರಯಾಣದ ಉದ್ದಕ್ಕೂ ಗಸ್ತು ಹೊಡೆಯುತ್ತಿತ್ತು. ತಾನೂ ಹಿಂತಿರುಗುವಾಗ, ದೃಷ್ಟಿ ಪಡೆದು ಸಕಲವನ್ನೂ ನೋಡುವಂತಾಗಿ ಆ ಮಗುವಿನಂತೆ ಆಗುವೆನೆಂಬ ಆಸೆಯ ಬುದ್ಬುದಗಳು ಎದೆಯಲ್ಲಿ ಪುಟಿದೆದ್ದವು. ಇಂತಹ ಸಿಹಿ ಕನಸುಗಳಲ್ಲಿ, ಭರವಸೆಯ ಆಸೆಯ ಕಡಲಲ್ಲಿ ಮುಳುಗಿಹೋದ ಭಾವೇಶ್‌ಗೆ ಹರಿದ್ವಾರ ಯಾವಾಗ ಬಂತು ಎಂದು ಕೂಡಾ ಅರಿವಾಗಲಿಲ್ಲ. ಆಸೆ ಎಂದಿಗೂ ಸಾಯುವುದಿಲ್ಲ. ನಿರಾಶೆಯ ಅನುಭವಗಳ ಭಾರದಲ್ಲಿ ಎದೆಯ ಆಳದಲ್ಲೆಲ್ಲೋ ಹುಗಿದುಹೋಗಿದ್ದ ಆಸೆ ಪುಟಿದೆದ್ದು ಕುಳಿತಿತ್ತು.

ಹರಿದ್ವಾರದಲ್ಲಿ ಇಳಿದು ಬಾಬಾ ರಾಮ್‌ದೇವ್ ಅವರ ಆಶ್ರಮಕ್ಕೆ ಹೋದರು. ಅವರ ಬಳಿ